**OS No. 102/2020** **DW-2**

ದಿನಾಂಕ: **07.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ

ವಾದಿಯರು ದಾರಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ನಾವು ಮತ್ತು ಪ್ರತಿವಾದಿಯರು ಒಂದೇ ಊರಿನವರಾಗಿರುತ್ತೇವೆ. ಈ ದಾವೆಯಲ್ಲಿ ತಕರಾರು ಸಲ್ಲಿಸಲು ನನ್ನ ಗಂಡನಾದ ಲಿಂಗಪ್ಪ ಶೆಟ್ಟಿ ರವರು ಮಾಹಿತಿಯನ್ನು ನೀಡಿರುತ್ತಾರೆ. 1 ನೇ ಪ್ರತಿವಾದಿಯು ನನ್ನ ಅತ್ತೆಯ ಮಗನಾಗಿರುತ್ತಾನೆ. ಉಳಿದ ಪ್ರತಿವಾದಿಗಳು ನನ್ನ ಕುಟುಂಬಸ್ಥರಾಗಿರುತ್ತಾರೆ. ವಾದಿಯರು ದಾವೆಯನ್ನು ಸರ್ವೆ ನಂಬರ್ 261 ರ ಮೇಲೆ ಸಲ್ಲಿಸಿರುತ್ತಾರೆ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ಮತ್ತು ನಾನು ಈ ದಾವೆಯನ್ನು ನಡೆಸುತ್ತಿದ್ದೇವೆ. 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯು ಸರ್ಕಾರಿ ಶಾಲೆಯ ಶಿಕ್ಷಕರಾಗಿರುತ್ತಾರೆ. ವಾದಿಯರಿಗೆ ದಾವಾಸ್ವತ್ತು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ ನನಗೆ ಓದಲು ಬರೆಯಲು ಬರುತ್ತದೆ.

ದಾವಾ 'ಎ' ಅನುಸೂಚಿ ಸ್ವತ್ತು ವಾದಿಯರಿಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನಾವು ಚಿಕ್ಕವರಿದ್ದಾಗಿಂದಿಲೂ ಸಹ ನಾವೇ ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಅನುಭವಿಸಿಕೊಂಡು ಬರುತ್ತಿದ್ದೇನೆ ಎಂದು ಹೇಳುವ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ಸದರಿ ಸ್ವತ್ತನ್ನು ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಸಾಕ್ಷಿಯು ಮುಂದುವರದೆ ಸದರಿ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತು ನನ್ನ ತಂದೆಗೆ ಅವರ ಪೂರ್ವಜರಿಂದ ಬಂದಿರುತ್ತದೆ. ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ಓದಿಸಿ ತಿಳಿದುಕೊಂಡಿರವುದಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ದಾವಾ 'ಎ' ಮತ್ತು ಬಿ ಅನುಸೂಚಿ ಸ್ವತ್ತಿನ ಬಗ್ಗೆ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ವಾದಿಯ ಗಂಡನಾದ ಅನಂತಮೂರ್ತಿ ಬಿನ್ ಪಣಿಯಪ್ಪ ಜೋಯ್ಸ್ ರವರ ಬಗ್ಗೆ ಗೊತ್ತಿದೆ. ದಿನಂಾಂಕ 28.07.1955 ರಲ್ಲಿ ವಾದಿಯರ ಕುಟುಂಬದಲ್ಲಿ ಆದ ನೋಂದಾಯಿತ ವಿಭಾಗ ಪತ್ರದ ಮೂಲಕ ದಾವಾ 'ಎ' ಮತ್ತು ಬಿ ಅನುಸೂಚಿ ಸ್ವತ್ತುಗಳು ಅನಂತ ಮೂರ್ತಿ

ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅನಂತ ಮೂರ್ತಿ ರವರ ತಂದೆಯಾ ಪಣಿಯಪ್ಪ ಜೊಯ್ಸ್ ರವರು ಸದರಿ ಸ್ವತ್ತಿನಲ್ಲಿ 4 ಎಕರೆ ಜಮೀನನ್ನು ದಿನಾಂಕ 16.05.1956 ರಲ್ಲಿ ಸರ್ಕಾರಕ್ಕೆ ಭೂ ದಾನ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭೂ ದಾನ ಪ್ರಕ್ರಿಯೆಯನ್ನು ಪ್ರಶ್ನಿಸಿ ವಾದಿಯರು ಸಿವಿಲ್ ನ್ಯಾಯಾಲಯ ದಲ್ಲಿ ಅಸಲು ದಾವಾ ಸಂಖ್ಯೆ259/1998 ನ್ನು ಸಲ್ಲಿಸಿದ್ದರು ಅದರ ಮೇಲೆ ಹಲವಾರು ತೀರ್ಪುಗಳು ಆಗಿ ನಂತರದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ಅನುಸಾರ ಪ್ರಸ್ತುತ ಹಿರಿಯ ಸಿವಿಲ್ ನ್ಯಾಯಾಲಯ ತೀರ್ಥಹಳ್ಳಿ ಯಲ್ಲಿ ಅಸಲು ದಾವಾ ಸಂಖ್ಯೆ 21/2023 ಊರ್ಜಿತದಲ್ಲಿರುತ್ತದೆ ಎಂದರೆ ನನಗೆ ಗುಾತ್ತಿಲ್ಲ. ದಾವಾ ಎ ಅನೂಸೂಚಿ ಸ್ವತ್ತು ಮೂಲತಃ ಅಂತಮೂರ್ತಿ ರವರಿಗೆ ಸೇರಿರುತ್ತದೆ ಸದರಿ ರವರು ಮೃತಪಟ್ಟ ನಂತರ ದಾವಾ ಎ ಅನುಸೂಚಿ ಸ್ವತ್ತು 1 ನೇ ವಾದಿಯ ಹೆಸರಿಗೆ ಖಾತಾ ಬದಲಾವಣೆ ಆಗಿರುತ್ತದೆ ಹಾಗೂ ವಾದಿಯರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ನನಗೆ ಗೂತ್ತಿಲ್ಲ.

ನಾನು ಮೇಲೆ ತಿಳಿಸಿರುವಂತೆ ದಾರಿ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ? ಎಂದರೆ ಸಾಕ್ಷಿಯು ನಮಗೆ ಸೇರಿದ ಸ್ವತ್ತಿನ ಮೇಲ್ಭಾಗದಲ್ಲಿ ದಾರಿ ಬರುತ್ತದೆ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಎ ಮತ್ತು ಬಿ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾರಿ ಇರುವ ಬಗ್ಗೆ ಸರ್ಕಾರಿ ದಾಖಲೆಗಳಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಅನುಸೂಚಿ ಸ್ವತ್ತಿನಲ್ಲಿ ನಾಗಬನ ಮತ್ತು ದೇವಸ್ಥಾನ ಇದೆ ಎಂದರೆ ಸಾಕ್ಷಿಯು ನಾವು ಹೋಗುವ ದಾರಿಯ ಪಕ್ಕದಲ್ಲಿ ಸದರಿ ನಾಗಬನ ಮತ್ತು ದೇವಸ್ಥಾನ ಇದೆ ಯಾವ ಸರ್ವೆ ನಂಬರ್ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ನನಗೆ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಯಾವುದೇ ಪಹಣಿ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ವಾದಿಯರ ದಾವಾ ಎ ಅನುಸೂಚಿ ಸ್ವತ್ತಿನ ಸ್ವಾಧೀನಾನುಭವಕ್ಕೆ ನಾವುಗಳು ತೊಂದರೆ ನೀಡಿದ ಕಾರಣ ಈ ದಾವೆಯನ್ನು ವಾದಿಯರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ . 1 ನೇ ಪ್ರತಿವಾದಿಯು ಸರ್ಕಾರಿ ಸ್ವತ್ತನ್ನು ಲಪಾಟಾಯಿಸುವ ಉದ್ದೇಶದಿಂದ ನನಗೆ ಹಣ ನೀಡಿ ಸಾಕ್ಷಿ ನೀಡಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಾತನ್ನು ಕೇಳಿಕೊಂಡು ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ. ದಾವಾ ಎ ಮತ್ತು ಬಿ ಅನುಸಾುಚಿ ಸ್ವತ್ತುಗಳು ಅನಂತ ಮೂರ್ತಿ ರವರಿಗೆ ಸೇರಿದ ಸ್ವತ್ತುಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಃ ಇಲ್ಲ.

ಪ್ರಕರಣವು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮುಂದುವರಿದ ಪರ ವಿಚಾರಣೆಗೆ ಆರೋಪಿತನ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.

ಮುಂದುವರಿದ ಆರೋಪಿತನ ಪರ ವಿಚಾರಣೆಗೆ ಆರೋಪಿತನ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಆರೋಪಿತನ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಗಿದೆ.

ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಮಂಜಸ ಕಾರಣ ಕಂಡು ಬಂದಿರುವುದಿಲ್ಲ, ಹೀಗಾಗಿ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ